'ಇದು ನಿಮ್ಮ ಒಪಿನಿಯನ್ ಅಷ್ಟೆ. ಅದನ್ನ ನಾ ಅಕ್ನಾಲೆಜ್ ಮಾಡುವುದಿಲ್ಲ.'

'ಮಾಡಿ, ಬಿಡಿ, ಬಟ್ ನಾನು ಹೋದಮೇಲೂ ನೀವಿದರ ಬಗ್ಗೆ ಯೋಚಿಸದೇ ಇರಲ್ಲ. ನಮ್ಮ ಬಗ್ಗೆ ಬರೆದಿರಲ್ಲ ಅದೇ ಕಾಳಜಿಯಿಂದ ನಿಮ್ಮ ಬಗ್ಗೆ ಬರೆಯಿರಿ ನೋಡೋಣ. ನಿಮ್ಮ ಮನೆಯವರು ಮನೆ ಬಿಟ್ಟು ಹೋಗಿರುವ ಬಗ್ಗೆ, ನಿಮ್ಮ ಅವರ ಸಂಬಂಧದ ಬಗ್ಗೆ, ಅವರ ಗೆಳೆಯನ ಬಗ್ಗೆ, ನಿಮಗಿರುವ ಅಸಂಖ್ಯಾತ ಗೆಳತಿಯರ ಬಗ್ಗೆ ಬರೆಯಿರಿ ನೋಡೋಣ.'

ನನ್ನ ನೆತ್ತರು ಕುದಿಯಿತು.

'ನೀವೊಬ್ಬ ಹೆಣ್ಣು ಅನ್ನುವ ಕಾರಣಕ್ಕೆ ಸುಮ್ಮನಿದ್ದೀನಿ, ಇಲ್ಲವಾಗಿದ್ರೆ ಇಷ್ಟೊತ್ತಿಗೆ...'

'ಓ ಫಕ್ ಸಚ್ಚನ್ ಹಿಪೋಕ್ರಿಟ್, ಇದೇನು ಹೆಣ್ಣಿನ ಬಗೆಗಿನ ಕಾಳಜಿಯೇ? ಈ ಕಾಳಜಿ ನೀವು ಯಾರೋ ಹೆಣ್ಣಿನ ಬಗ್ಗೆ ಕಥೆಯಲ್ಲಿ ಬರಕೊಂಡು ಕೂರುವಾಗ ಇರಲಿಲ್ಲವೆ? ಇರ್ಲಿ, ಮೊದ್ಲಿಗೆ ನಮ್ಮ ಬಗ್ಗೆ ಬರೆದಿರೋದಲ್ಲಿ ತಪ್ಪಾಗಿದೆ. ಅದನ್ನ ಸರಿಪಡಿಸಿ ಬರೆಯಿರಿ ಅಂತ ಹೇಳೋಕಷ್ಟೇ ಬಂದಿದ್ದು, ಇದೋ ಇದ್ರಲ್ಲಿ ನಮ್ಮ ಬಗೆಗಿನ ನಿಜವಿದೆ, ನಾವು ನೀವಂದಂತೆ ಕತ್ತಲ ಕಳ್ಳ ಪ್ರೇಮಿಗಳಲ್ಲ. ಬರೆಯೋದು ಬರೆದು, ನಮ್ಮ ಬಗ್ಗೆ ಏನೇನೂ ಗೊತ್ತಿಲ್ಲ ಅನ್ನೋ ಥರ ಡಿನೇ ಮಾಡ್ತಿದೀರಾ ನೋಡಿ...ಥೀ' ಎಂದವಳೇ, ಅವಳು ತಂದಿದ್ದ ಪೇಪರ್ ಸುರುಳಿಯನ್ನು ಟೀಪಾಯ್ ಮೇಲಿರಿಸಿ ಎದ್ದು ಹೋದಳು. ಅವಳು ಹೋಗುವಾಗ ಅವಳ ಸೆರಗು ಹಾರುತ್ತಾ ಅವಳನ್ನು ಹಿಂಬಾಲಿಸಿಕೊಂಡು ಹೋಯಿತು. ಅದೇ ಎದ್ದಿದ್ದ ಸುಂಟರ ಗಾಳಿಯೊಂದು ಶಾಂತವಾದಂತ ಮೌನವೊಂದು ಅಲ್ಲಿ ನೆಲೆಸಿ ನನ್ನನ್ನು ನಿರ್ವಿಣ್ಣಗೊಳಿಸಿತು.

ನಾನು ಬಗ್ಗಿ ಅವಳು ಬಿಟ್ಟುಹೋಗಿದ್ದ ಪೇಪರ್ ಸುರುಳಿಯನ್ನೆತ್ತಿಕೊಂಡೆ.

'ನಾವು ಗಂಡ-ಹೆಂಡಿರಲ್ಲ, ನಾವು ಒಟ್ಟಿಗೆ ಒಂದೇ ಮನೆಯೊಳಗೆ ವಾಸಿಸುವುದಿಲ್ಲ. ನಮ್ಮ ಸಂಬಂಧಕ್ಕೊಂದು ಹೆಸರಿಟ್ಟು ಅದನ್ನು ನಾವು ಸೀಮಿತಗೊಳಿಸಿಕೊಳ್ಳಲು ಬಯಸುವುದಿಲ್ಲ, ಚೌಕಟ್ಟಿನೊಳಗೆ ಅರಳುವ ಸಂಬಂಧಕ್ಕೆ ಅದರದ್ದೇ ಆದ ಮಿತಿಯಿರುತ್ತದೆ. ಕಿಟಕಿಯಿಂದ ಇಣುಕಿದ ಬೆಳಕಿನ ಕೋಲಿನಂತೆ ಅದರ ಪರಿಧಿ ನಿಗದಿತವಾಗಿರುತ್ತದೆ. ಆದರೆ ನಮ್ಮ ಈ ಬಂಧ ಅನಂತವಾಗಿದೆ, ಯಾವ ಬಂಧನಕ್ಕೂ ಸಿಲುಕದೆ, ಅದೇ ಸಮಯ ಎಲ್ಲ ಸಾಧ್ಯತೆಗಳನ್ನೂ ತೊಡಗಿಸಿಕೊಡಬಹುದಾದ ಸ್ವಾತಂತ್ರ್ಯವಿದೆ ನಮ್ಮೊಳಗೆ. ನಿಜವಾದ ಪ್ರೇಮ ಆತ್ಮಗಳೆಡೆಯಲ್ಲಿ ಹುಟ್ಟುವಂಥದ್ದು, ಅದು ನಿರಂಕುಶವಾದದ್ದು, ನಿರ್ಜರವಾದದ್ದು. ಅದಕ್ಕೆ ನೈತಿಕತೆಯ ಮುಖವಾಡ ತೊಡಿಸಿ ವಿರೂಪಗೊಳಿಸಬಾರದು. ಒಂದೇ ಮನೆಯೊಳಗೆ ವಾಸವಿದ್ದೂ ನಡುಗಡಲ ಅನಾಮಿಕ ದ್ವೀಪಗಳಂತೆ ಸಂಧಿಸದೇ ಉಳಿದುಬಿಡುವ ಸಂಬಂಧಗಳೊಂದು ಪಕ್ಕವಾದರೆ, ಎಲ್ಲ ಸೀಮೆಗಳನ್ನೂ ದಾಟಿ ನಿಸ್ಪೃಹವಾಗಿ ಪ್ರೇಮಿಸುವುದೇ ಒಂದು ಪಕ್ಕ. ಸಮಾಜ ಕೊಟ್ಟ ಹೆಸರಿನಡಿ ಸಂಬಂಧಗಳು ಬಹುಕಾಲ ಬಾಳಿಕೆ ಬರಬಹುದು. ಆದರೆ ಕೊನೆಗೆ ಜೊತೆಗುಳಿಯಬೇಕಾದದ್ದು ಪ್ರೇಮವಷ್ಟೆ? ಪ್ರೇಮವಿಲ್ಲದ ಸಂಬಂಧ ಒಂದು ಹೊರೆಯಲ್ಲದೆ ಮತ್ತೇನು? ಅನಿವಾರ್ಯತೆಯ ಸಂಕೋಲೆಯಲ್ಲಿ ಬಂಧಿಸಲ್ಪಟ್ಟು ಮುರುಕುತ್ತ ಮುರುಟುತ್ತ ಬಾಳುವ ಈ ಯಾವ ಸಂಬಂಧದ ಬಂಧನ ನಮಗೆ ಬೇಡ, ನಮ್ಮ ನಡುವೆ ಪ್ರೇಮವಿದ್ದರಷ್ಟೇ ಸಾಕು.

ನಾವು ಒಂದೇ ಸೂರಿನಡಿ ಇದ್ದೇವೆ, ಸೂರು ಎಂದರೆ ಆಕಾಶ ಎಂದು ತಿಳಿಬೇಕು. ಯಾರು ಎಷ್ಟೇ ದೂರದಲ್ಲಿದ್ದರೂ, ದೂರವೆಂಬುವುದು ಫಿಸಿಕಲ್ ಮಾತ್ರವಲ್ಲವೆಂಬುವುದನ್ನು ನೆನಪಿನಲ್ಲಿ ಇರಿಸಿಕೊಳ್ಳುತ್ತ ಹೇಳುವುದಾದರೆ ನಾವಿಬ್ಬರೂ ತುಂಬಾ ಹತ್ತಿರದಲ್ಲಿದ್ದೇವೆ. ಆದರೆ ನಮ್ಮ ನಡುವೆ ಅಂತರವಿದೆ, ಎಷ್ಟು ಬೇಕಾದರೂ ಹಿಗ್ಗಿಸಬಲ್ಲ ಕುಗ್ಗಿಸಿಕೊಳ್ಳಬಲ್ಲ ಸ್ಟ್ರೆಚಬಲ್ ಥರ. ನಮ್ಮ ನಡುವೆ ಏನೂ ಬೇಕಾದರೂ ನುಸುಳಿ ಹೋಗಬಹುದು, ಅದು ನಮ್ಮನ್ನು ಬೆಸೆಯುತ್ತದೆಯೇ ಹೊರತು, ಯಾವ ಕಾರಣಕ್ಕೂ ತಂತುವನ್ನು ತುಂಡರಿಸುವುದಿಲ್ಲ...

ಮುಂದೆ ಓದಬೇಕೆನಿಸಲಿಲ್ಲ.

ನಾನೂ ಇದನ್ನೇ ಬರೆದಿದ್ದೆ. ಹೀಗಲ್ಲ ಆದರೆ ಇದೇ ವಿಚಾರ. ಯಾವ ಬಂಧನದ ಹಂಗಿಲ್ಲದ, ಒಬ್ಬರನ್ನೊಬ್ಬರು ಪ್ರೇಮಿಸುವ, ಹೇಗಿದ್ದರೂ, ಯಾರ ಜತೆಗಿದ್ದರೂ, ಏನು ಮಾಡಿದರೂ ಒಬ್ಬರನ್ನೊಬ್ಬರು ಅಷ್ಟೇ ಆಪ್ತವಾಗಿ ಪ್ರೇಮಿಸುವ ಪ್ರೇಮಿಗಳ ಕಥೆ. ಅವರಿಬ್ಬರಿಗೆ ತಮ್ಮದೇ ಆದ ಬದುಕಿತ್ತು. ಪರಸ್ಪರ